ಸಾಕ್ಷಿಯನ್ನು ಪುನಃ ಕರೆಸಿ ದಿಃ 11.05.2017 ರಂದು ಪ್ರಮಾಣ ಮಾಡಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

(ಈ ಹಂತದಲ್ಲಿಮಾನ್ಯ ಹಿರಿಯಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯು ಮುಂದುವರೆದ ಮುಖ್ಯ ವಿಚಾರಣೆಯನ್ನು ಮಾಡಲು ಅನಮುತಿಯನ್ನು ಕೋರಿದ್ದು ಆರೋಪಿತರ ಪರ ಮಾನ್ಯ ವಕೀಲರು ತಮ್ಮ ಯಾವುದೇ ತಕರಾರುಇರುವುದಿಲ್ಲವೆಂದು ಹೇಳಿದ್ದರ ಮೇರೆಗೆ ಸಾಕ್ಷಿಯು ಮುಂದುವರೆದ ಮುಖ್ಯವಿಚಾರಣೆಯನ್ನುಮಾಡಲು ಮಾನ್ಯ ಹಿರಿಯ ಸಹಾಯಕ ಅಭಿಯೋಜಕರಿಗೆ ಅನುಮತಿಯನ್ನು ನೀಡಲಾಯಿತು.)

ನಾನು ಸದರಿ ದಾಖಲಾತಿಗಳ ಮೇಲೆ ಸದರಿ ಸಂದರ್ಭದಲ್ಲಿ ಮ್ಯಾನೇಜರ' ಆಗಿದ್ದ ಶ್ರೀ ಶಫೀವುಲ್ಲಾ 2ನೇ ಆರೋಪಿ ಮತ್ತು ಅವರ ಅಣ್ಣ ಮತ್ತು ಅವರ ತಮ್ಮ ಮತ್ತು ಅವರ ತಂದೆ ಹಾಗೂ ಅವರ ಭಾವ ಇವರ ಸಹಿಗಳನ್ನು ಅವರ ಮನೆಯಲ್ಲಿ ತೆಗೆದುಕೊಂಡು ಬರಲು ನನಗೆ ನಿರ್ದೇಶನ ಕೊಟ್ಟಿದ್ದರ ಮೇರೆಗೆ ನಾನು ಅವರುಗಳ ಮನೆಗೆ ಹೋಗಿ ಸದರಿ ಸಹಿಗಳನ್ನು ಪಡೆದುಕೊಂಡು ಬಂದಿರುತ್ತೇನೆ. ನಾನು ಸದರಿ ತಿದ್ದುಪಡಿಗಳನ್ನು ಮಾಡಿರುವುದು ಹಾಗೂ ಸದರಿಯವರು ಸಹಿಗಳನ್ನು ಪಡೆದುಕೊಂಡಿರುವುದು 2ನೇ ಆರೋಪಿಯ ನಿರ್ದೇಶನದ ಮೇರೆಗೆ ಆಗಿರುತ್ತದೆ.

(ಮುಂದುವರೆದ ಮುಖ್ಯ ವಿಚಾರಣೆಗಾಗಿ ವೇಳೆಯನ್ನು ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾ.